# ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು

## ಬಿ.ಎಡ್. ಕೋರ್ಸ್‌ಗಾಗಿ ಪ್ರವೇಶ ಆರಂಭವಾಗಿದೆ!!

(ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಹಾಗೂ ಎನ್.ಸಿ.ಟಿ.ಇ.ಯಿಂದ ಮಾನ್ಯತೆ ಪಡೆದಿದೆ.)

## ಗಮನಿಸಿ!! ಅಪೂರ್ವ ಅವಕಾಶ!!

**2012 ಆಗಸ್ಟ್‌ನಿಂದ ಪ್ರಾರಂಭವಾಗಿ 2013 ಮೇ ವರೆಗೆ ನಡೆಸಲಾಗುವ ಬಿ.ಎಡ್. ಕೋರ್ಸಿನ ಸರ್ಟಿಫಿಕೇಟ್ ಪಡೆದು ಒಂದು ಶೈಕ್ಷಣಿಕ ವರ್ಷವನ್ನು ಉಳಿಸಿ.**

• ಬಿ.ಎಡ್ ಪದವಿಯೊಂದಿಗೆ ಸ್ನಾತಕ ಡಿಪ್ಲೊಮಾವನ್ನು (ಸಿ.ಎ.ಜಿ.ಡಿ.) ಸಹ ಒಂದೇ ವರ್ಷದಲ್ಲಿ ಪಡೆಯಿರಿ. • ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಬಿ.ಎಡ್. ಕಾಲೇಜು ಉಳಿದ ಕಾಲೇಜುಗಳಿಗಿಂತ ವಿಶಿಷ್ಟವಾಗಿದೆ. • ಪುರುಷರಿಗಾಗಿ ವಿಶೇಷ ವಸತಿ ಸೌಲಭ್ಯಗಳನ್ನು (ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತ್ಯೇಕ ಕೊಠಡಿ) ನೀಡುವ ಸಂಪೂರ್ಣ ಆವಾಸಿ ಬಿ.ಎಡ್. ಕೋರ್ಸ್‌ನಲ್ಲಿ ಪ್ರವೇಶ ಪಡೆದು ಉತ್ತಮ ಉಪಾಧ್ಯಾಯರಾಗಬೇಕೆಂಬ ನಿಮ್ಮ ಕನಸನ್ನು ಸಾಕಾರಗೊಳಿಸಿಕೊಳ್ಳಿ. • ಈ ಪದವಿಯು ಆನರ್ಸ್ ಪದವಿಗೆ ತತ್ಸಮವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಮೈಸೂರು ವಿಶ್ವವಿದ್ಯಾನಿಲಯದಿಂದ 4 ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣಪತ್ರವನ್ನು ಪಡೆಯುತ್ತಾನೆ. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅಧಿಕ ಕ್ರೆಡಿಟ್‌ಗಳನ್ನು ಪಡೆಯಬಹುದಾಗಿದೆ. • ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಕ್ಯಾಂಪಸ್ ಸಂದರ್ಶನ ಮತ್ತು ಆ ಮೂಲಕ ಒಳ್ಳೆಯ ಕಡೆ ಉದ್ಯೋಗ ಮತ್ತು ಆಕರ್ಷಕ ವೇತನ ಗಳಿಕೆಗೆ ಅವಕಾಶವಿದೆ. • ನಿಮ್ಮ ಆಯ್ಕೆಯ ವಿಷಯಗಳಲ್ಲಿ ಪರಿಣತಿ ದೊರಕುತ್ತದೆ. • ಮನಸೆಳೆಯುವ ಪ್ರಶಾಂತ ವಾತಾವರಣದಲ್ಲಿ ಯೋಗ ಮತ್ತು ಧ್ಯಾನದಲ್ಲಿ ತರಬೇತಿ, ಸ್ಪೋಕನ್ ಇಂಗ್ಲಿಷ್ ಮತ್ತು ಸಂವಹನ ಕೌಶಲ್ಯದಲ್ಲಿ ತರಬೇತಿ, ನೆಟ್‌ವರ್ಕ್ ಜಾಲವಿರುವ ಕಂಪ್ಯೂಟರ್ ಪ್ರಯೋಗಶಾಲೆ – ಮುಂತಾದ ಅತ್ಯಾಧುನಿಕ ಸೌಲಭ್ಯಗಳುಳ್ಳ ಏಕೈಕ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ ಪ್ರವೇಶ ಪಡೆಯಿರಿ.

**ಪ್ರಾಸ್ಪೆಕ್ಟಸ್ ಮತ್ತು ಅರ್ಜಿ ಫಾರಂಗಾಗಿ ಇಂದೇ ಸಂಪರ್ಕಿಸಿ:**

**Ramakrishna Institute of Moral and Spiritual Education, Yadavagiri, Mysore - 570 005**

Phone: 0821-2417666, e-mail: mysore.rimse@gmail.com

**ಕಛೇರಿ ವೇಳೆಯಲ್ಲಿ ಸಂಪರ್ಕಿಸಿ:** *9.00 a.m. to 4.00 p.m.*

# ಆಧ್ಯಾತ್ಮಿಕ ಶಿಬಿರ

(ಪುರುಷರಿಗಾಗಿ ಆವಾಸಿ ಕ್ಯಾಂಪ್)

**2012ನೇ ಜುಲೈ 13ರಿಂದ 17ರವರೆಗೆ**

**ಶಿಬಿರದ ತರಗತಿಗಳನ್ನು ನಡೆಸುವ ಮಾಧ್ಯಮ :** ಕನ್ನಡ ಮತ್ತು ಇಂಗ್ಲಿಷ್

ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ :

## ರೂ. 1,400/– ಮಾತ್ರ

* ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. * 130 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. * ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ಸ್ವವಿಳಾಸವಿರುವ (10 cm x 23 cm) ಲಕೋಟೆಗೆ ರೂ. 5/–ರ ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. ತುಂಬಿದ ಅರ್ಜಿ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **15ನೇ ಜೂನ್ 2012.**

**ವಿಳಾಸ:**

**Ramakrishna Institute of Moral and Spiritual Education, Yadavagiri, Mysore- 570020**

**Phone: 0821-2417666, e-mail: mysore.rimse@gmail.com**



ಸಂಪಾದಕೀಯ

# ವಿವೇಕಾನಂದ ಚಿಂತನ

## ಕರ್ಮಯೋಗದ ಕಂಪು

**ಅಪೂರ್ವ ಕೊಡುಗೆ**

**ಆ**ಧುನಿಕ ಆಧ್ಯಾತ್ಮಿಕ ಸಾಹಿತ್ಯಕ್ಕೆ ಸ್ವಾಮಿ ವಿವೇಕಾನಂದರು ನೀಡಿರುವ ಅಪೂರ್ವ ಕೊಡುಗೆ 'ಕರ್ಮಯೋಗ'. ಸಾಂಪ್ರದಾಯಿಕ ಸಿದ್ಧಾಂತಗಳಲ್ಲಿ 'ಕರ್ಮಯೋಗ' ವೆಂಬುದು ಕೇವಲ ಪ್ರಾಥಮಿಕ ಘಟ್ಟವಾಗಿದೆ; ಚಿತ್ತಶುದ್ಧಿಯನ್ನು ತಂದುಕೊಟ್ಟು, ಜ್ಞಾನನಿಷ್ಠೆಗೆ ಸಹಾಯಕವಾಗುವ ಅಂಶವಾಗಿದೆ. ಆದರೆ ಕರ್ಮಯೋಗವು ಆಧ್ಯಾತ್ಮಿಕ ಸಾಧನೆಯ ಒಂದು ಸ್ವತಂತ್ರ ಮಾರ್ಗವಾಗಬಲ್ಲುದು ಎಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸುತ್ತಾರೆ. ಬೇರೆಲ್ಲ ಯೋಗಗಳ ಹಾಗೆ ಪರಿಪೂರ್ಣತೆಯತ್ತ ಕರೆದುಕೊಂಡು ಹೋಗುವ ಸಾಮರ್ಥ್ಯ ಇದಕ್ಕೂ ಇದೆ ಎಂಬುದನ್ನು ಸ್ಪಷ್ಟವಾಗಿ ಅವರು ನಿರೂಪಿಸುತ್ತಾರೆ. ದೇವರನ್ನು ನಂಬದವನೂ ಕೇವಲ ನಿಸ್ವಾರ್ಥಕರ್ಮದಿಂದ ನಿಷ್ಕಾಮಭಾವವನ್ನು ಪಡೆಯಲು ಸಾಧ್ಯ ಎನ್ನುವ ಕ್ರಾಂತಿಕಾರಕ ನಿಲುವು ಸ್ವಾಮೀಜಿಯವರದು. ಹಾಗೆಯೇ ಒಬ್ಬ ಭಕ್ತ, ಒಬ್ಬ ಜ್ಞಾನಿ ಮತ್ತು ಒಬ್ಬ ಯೋಗಿ ಯಾವ ಗತಿಯನ್ನು ಪಡೆಯುತ್ತಾನೆಯೋ, ಅದೇ ಅಂತಿಮ ಸಿದ್ಧಿಯನ್ನು ಕರ್ಮಯೋಗಿಯೂ ಪಡೆಯುತ್ತಾನೆ ಎನ್ನುವ ದಿಟ್ಟ ಆಲೋಚನಾಲಹರಿ ಅವರದು. ಇವೆಲ್ಲ ವೈಶಿಷ್ಟ್ಯಗಳು ವಿವೇಕಾನಂದರ 'ಕರ್ಮಯೋಗ'ವನ್ನು ಅತ್ಯಂತ ಅನುಪಮ ವಿಚಾರಧಾರೆಯನ್ನಾಗಿ ಮಾಡಿವೆ.

**ಕರ್ಮ ಎಂದರೇನು? :** ಆಧುನಿಕ ಕಾಲದ ಆವಶ್ಯಕತೆಗಳು ಮತ್ತು ಸಂಕೀರ್ಣತೆಗಳಿಗೆ ಅನುಗುಣವಾಗಿ, ವಿಭಿನ್ನ ರೀತಿಯಲ್ಲಿ ಸ್ವಾಮೀಜಿ ಕರ್ಮದ ವ್ಯಾಖ್ಯಾನವನ್ನು ಮಾಡುತ್ತಾರೆ. ಯಜ್ಞ ಯಾಗಗಳಿಗೆ ಸೀಮಿತವಾಗಿದ್ದ 'ಕರ್ಮ' ಪದವನ್ನು, ಎಲ್ಲಾ ರೀತಿಯ ಕೆಲಸಕಾರ್ಯಗಳಿಗೆ, ಉಸಿರಾಡುವುದಕ್ಕೆ ಕೂಡ ಸ್ವಾಮೀಜಿ ಅನ್ವಯಿಸುತ್ತಾರೆ. ಪ್ರತಿಯೊಂದು ಕರ್ಮವೂ ತನ್ನ ಮುದ್ರೆಯನ್ನು ನಮ್ಮ ಮೇಲೆ ಒತ್ತಿಬಿಡುತ್ತದೆ. ಅದೇ ಮತ್ತೊಂದು ಕರ್ಮವಾಗಿ ಹೊರಹೊಮ್ಮುತ್ತದೆ. ನಮ್ಮ ಮನಸ್ಸನ್ನು ನಾವೇ ಪರೀಕ್ಷಿಸಿಕೊಂಡಾಗ, ನಮ್ಮ ಅಳು-ನಗು, ನಮ್ಮ ಶಾಪ-ಆಶೀರ್ವಾದ, ನಮ್ಮ ನಿಂದೆ-ಸ್ತುತಿ – ಇವುಗಳಲ್ಲಿ ಪ್ರತಿಯೊಂದೂ ನಮ್ಮೊಳಗೇ ಅಡಗಿಕೊಂಡಿದ್ದು, ಅನೇಕ ಪೆಟ್ಟುಗಳ ಮೂಲಕ ಹೊರಬಂದಿದೆ. ಆ ಎಲ್ಲ ಏಟುಗಳ ಒಟ್ಟು ಮೊತ್ತವೇ ಕರ್ಮ, ಕ್ರಿಯೆ ಅಥವಾ ಕಾರ್ಯ. ಆತ್ಮನಿಗೆ ಬೀಳುವ ಪ್ರತಿಯೊಂದು ಮಾನಸಿಕ, ಕಾಯಿಕ ಪೆಟ್ಟೂ ಕರ್ಮವೇ.

**ಶೀಲ ಅಥವಾ ಚಾರಿತ್ರ್ಯ :** ನಾವು ಮಾಡುವ ಕರ್ಮಗಳು ಒಳ್ಳೆಯದು, ಕೆಟ್ಟದ್ದು, ಸುಖ, ದುಃಖ – ಇವೆಲ್ಲವನ್ನೂ ತಂದುಕೊಡುತ್ತವೆ. ಈ ಬಗೆಯ ಅನೇಕ ದ್ವಂದ್ವಗಳು ಜೀವಿಯ ಮುಂದೆ ಸುಳಿಯುವಾಗ, ಅವನಲ್ಲಿ ವಿವಿಧ ಬಗೆಯ ಚಿತ್ರಗಳನ್ನು ಅವು ಉಂಟು ಮಾಡುತ್ತವೆ. ಈ ಬಗೆಯಲ್ಲಿ ಒಂದರಮೇಲೊಂದು ಕಲೆತ ಚಿತ್ರಗಳ ಪರಿಣಾಮವನ್ನೇ ನಾವು **'ಶೀಲ'** ಅಥವಾ **'ಚಾರಿತ್ರ್ಯ'** ಎಂದು ಕರೆಯುತ್ತೇವೆ. ಒಬ್ಬ ಮನುಷ್ಯ ಮಾಡುವ ಸಣ್ಣ ಕಾರ್ಯದಲ್ಲಿಯೇ ಆತನ ಶೀಲ ನಿಜವಾಗಿ ವ್ಯಕ್ತವಾಗುವುದು. ಯಾರ ಶೀಲವು ಅವನೆಲ್ಲೇ ಇರಲಿ, ಏನನ್ನೇ ಮಾಡುತ್ತಿರಲಿ, ಸರ್ವದಾ ಪರಿಶುದ್ಧವಾಗಿರುವುದೋ, ಭವ್ಯವಾಗಿರುವುದೋ ಅವನೇ ನಿಜವಾಗಿ ಮಹಾನ್‌ವ್ಯಕ್ತಿ. ಕರ್ಮದ ಫಲಗಳಾದ ಸುಖದುಃಖಗಳು ಒಬ್ಬ ಮನುಷ್ಯನನ್ನು ಆಶ್ರಯಿಸುತ್ತವೆ. ಅವನ್ನು ಅವನು ಮತ್ತೆ ಮಹಾಪ್ರವಾಹದಂತೆ ತನ್ನ ನಡತೆಯ ರೂಪದಲ್ಲಿ ಹೊರಗೆ ಬಿಡುತ್ತಾನೆ. ಇದನ್ನೇ ಆತನ 'ಶೀಲ'ವೆಂದು ಕರೆಯುವುದು. ಹೀಗೆ ಕರ್ಮವು ಒಬ್ಬನ ಶೀಲದ ಮೇಲೆ ಸಂಪೂರ್ಣ ಪರಿಣಾಮವನ್ನು ಬೀರುತ್ತದೆ. ಕರ್ಮದ ಮೂಲಕವೇ ಅಂತಹ ಶೀಲ ರೂಪುಗೊಳ್ಳುವುದು. ನಾವು ಯಾವುದನ್ನು ಇಚ್ಛಾ ಶಕ್ತಿಯೆಂದು ಕರೆಯುತ್ತೇವೆಯೋ, ಅದಕ್ಕೆ ಮೂಲ ಈ ಶೀಲವೇ.

**ಕರ್ಮದ ಉದ್ದೇಶ :** ಕರ್ಮಕ್ಕಾಗಿ ಮಾತ್ರ ಕರ್ಮ ಮಾಡುವುದು ಕರ್ಮಯೋಗದ ಆದರ್ಶ. ಸತ್ಯ, ನಿಸ್ವಾರ್ಥತೆ – ಇವೇ ಕರ್ಮದ ಉದ್ದೇಶವಾಗಬೇಕು. ಈ ಬಗೆಯ ಆತ್ಮಸಂಯಮದಿಂದ ಮಾಡಿದ ಕಾರ್ಯವು ಏಸು, ಬುದ್ಧರಂತಹ ಮಹಾನ್ ಇಚ್ಛಾಶಕ್ತಿಯುಳ್ಳ ಮಹಾತ್ಮರನ್ನು ಸೃಷ್ಟಿಸುತ್ತದೆ. ಹಾಗೆಯೇ ಕರ್ಮವನ್ನು ಕುಶಲತೆಯಿಂದ ಮಾಡಬೇಕು. ಕುಶಲತೆ ಎಂದರೆ ಆತ್ಮಸಂಯಮ ಎಂದರ್ಥ. ಸ್ವಾರ್ಥದಿಂದ ನಮ್ಮ ಶಕ್ತಿ ಪೋಲಾಗುತ್ತದೆ. ಆತ್ಮಸಂಯಮದಿಂದ ಶಕ್ತಿ ಸಂಚಯವಾಗುತ್ತದೆ. ಆತ್ಮಸಂಯಮಿಯಾದವನು ಅತ್ಯಂತ ನಿರ್ಜನ, ನೀರವವಾದ ಪ್ರದೇಶದಲ್ಲೂ ಅತ್ಯಂತ ಚಟುವಟಿಕೆಯಿಂದ ಇರುತ್ತಾನೆ, ಅತ್ಯಂತ ಗಜಿಬಿಜಿ ಇರುವ ಪ್ರದೇಶದಲ್ಲೂ ಶಾಂತನಾಗಿರುತ್ತಾನೆ. ಇದೇ ಕರ್ಮಯೋಗದ ಆದರ್ಶ ಸ್ಥಿತಿ.

**ನೀತಿ ಅಥವಾ ಸದಾಚಾರ:** ಯಾವ ಕರ್ಮವನ್ನು ಮಾಡಬೇಕು ಎಂದು ನಿರ್ಧರಿಸುವುದೇ ನೀತಿ. ಅದು ಪರಿಸ್ಥಿತಿಗೆ ಅನುಗುಣವಾಗಿ ಬೇರೆ ಬೇರೆ ಆಗಬಹುದು. ನೀತಿಯಲ್ಲಿ ಹಂತಗಳಿವೆ. ಆದರೆ ನಮ್ಮ ಬಗ್ಗೆ ನಾವು ಕೀಳಾದ ಭಾವನೆಯನ್ನು ಇಟ್ಟುಕೊಂಡು, ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು. ನಮ್ಮ ಮೊದಲ ಕರ್ತವ್ಯ ಆತ್ಮನಿಂದೆಯನ್ನು ಬಿಟ್ಟುಬಿಡುವುದು.

ಮೊದಲು ಬೇಕಾದುದು ಆತ್ಮಶ್ರದ್ಧೆ, ನಂತರ ಭಗವಂತನಲ್ಲಿ ಶ್ರದ್ಧೆ. ಮೊದಲಿಗೇ ಯಾರೂ ನೀತಿಯ ಅಂತಿಮ ಆದರ್ಶವನ್ನು ತಲುಪಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಪ್ರತೀಕಾರ ಮಾಡದಷ್ಟು ತಮಸ್ಸಿನಲ್ಲಿ ಇರುವವನು ಮೊದಲು ಪ್ರತೀಕಾರ ಮಾಡಲು ಕಲಿತು, ರಜಸ್ಸನ್ನು ಪಡೆಯಬೇಕು. ಅನಂತರ ಮಾತ್ರ ಅವನಿಗೆ ಪ್ರತೀಕಾರ ಮಾಡದ ಸಾತ್ವಿಕ ಸ್ಥಿತಿಯನ್ನು ತಲುಪಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಆದರ್ಶವನ್ನು ಅವಲಂಬಿಸುವುದು ಇಲ್ಲಿ ಬಹಳ ಮುಖ್ಯ. ಒಬ್ಬ ಗೃಹಸ್ಥ ಮತ್ತು ಒಬ್ಬ ಸಂನ್ಯಾಸಿಯ ಆದರ್ಶಗಳನ್ನು ಹೀಗೆಯೇ ನೋಡಬೇಕು. ಇವರಿಬ್ಬರಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಅವರವರ ಆದರ್ಶವನ್ನು ಸರಿಯಾಗಿ ಪಾಲಿಸಿದರೆ, ಇಬ್ಬರೂ ಶ್ರೇಷ್ಠರೇ.

**ಕರ್ಮರಹಸ್ಯ:** ಒಬ್ಬ ಮನುಷ್ಯನಿಗೆ ಮಾಡುವ ದೈಹಿಕ ಅಥವಾ ಬೌದ್ಧಿಕ ಸಹಾಯಕ್ಕಿಂತಲೂ, ಆಧ್ಯಾತ್ಮಿಕ ಸಹಾಯ ಅತ್ಯಂತ ಶ್ರೇಷ್ಠ ಮಟ್ಟದ್ದು. ಆಧ್ಯಾತ್ಮಿಕತೆಯು ಆತ್ಮಜ್ಞಾನವನ್ನು ಉಂಟುಮಾಡುತ್ತದೆ. ಅದು ಮನುಷ್ಯನ ಕ್ಲೇಶಗಳನ್ನು ಕಳೆಯುತ್ತದೆ. ನಾವು ಮಾಡುವ ಶುಭ ಅಶುಭ – ಇವೆರಡೂ ರೀತಿಯ ಕರ್ಮಗಳು ಕ್ಲೇಶವನ್ನು ಉಂಟುಮಾಡುತ್ತವೆ. ಪ್ರತಿಯೊಂದು ಕರ್ಮವೂ ಶುಭಾಶುಭಗಳ ಮಿಶ್ರಣ. ಇವೆರಡೂ, ಅವುಗಳ ಫಲಗಳೂ ಆತ್ಮನನ್ನು ಬಂಧಿಸುವಂಥವೇ. ಹೀಗಾಗಿ ನಾವು ಮಾಡುವ ಕೆಲಸವನ್ನು ಅನಾಸಕ್ತಿಯಿಂದ ಮಾಡುವುದೇ ಕರ್ಮದ ರಹಸ್ಯ. ಇದೇ ಭಗವದ್ಗೀತೆಯ ಕೇಂದ್ರಭಾವ: **“ಸರ್ವದಾ ಕರ್ಮವನ್ನು ಆಚರಿಸುತ್ತಿರಬೇಕು. ಆದರೆ ಕರ್ಮಕ್ಕಾಗಲಿ, ಅದರ ಫಲಕ್ಕಾಗಲಿ ಕಟ್ಟುಬೀಳಕೂಡದು.”** ಈ ಆದರ್ಶವನ್ನು ದಕ್ಕಿಸಿಕೊಳ್ಳಲು ಮೊದಲು ಸತ್ಕರ್ಮಗಳನ್ನು ಮಾಡುತ್ತ ಹೋಗಬೇಕು. ಇದರಿಂದ ಮನಸ್ಸಿನಲ್ಲಿ ಒಳ್ಳೆಯ ಸಂಸ್ಕಾರಗಳು ಮೂಡುತ್ತವೆ. ಇಂತಹ ಸಂಸ್ಕಾರಗಳಿಂದ ಒಳ್ಳೆಯ ಚಾರಿತ್ರ್ಯ ಉಂಟಾಗುತ್ತದೆ. ಆಗ ಒಳ್ಳೆಯದನ್ನು ಮಾಡುವ ಪ್ರವೃತ್ತಿಯೇ ಮನಸ್ಸಿನಲ್ಲಿ ನಿಲ್ಲುತ್ತದೆ. ಇಂದ್ರಿಯಸಂಯಮದ ಶಕ್ತಿ ಇದರ ಫಲವಾಗಿ ಹುಟ್ಟುತ್ತದೆ. ಇದು ಆತ್ಮಮೋಕ್ಷಕ್ಕೆ ಎಡೆಮಾಡಿಕೊಡುತ್ತದೆ. ಇದೇ ಎಲ್ಲ ಯೋಗಗಳ ಗುರಿ. ಇಲ್ಲಿ ಸ್ವಾಮೀಜಿ ಗಮನೀಯವಾದ ಒಂದು ಮಾತನ್ನು ಹೇಳುತ್ತಾರೆ: “ಬುದ್ಧನು ಧ್ಯಾನದಿಂದಲೂ, ಕ್ರಿಸ್ತನು ಭಕ್ತಿಯಿಂದಲೂ ಯಾವ ಪದವಿಯನ್ನು ಪಡೆದನೋ, ಆ ಸ್ಥಿತಿಯನ್ನೇ ಒಬ್ಬ ವ್ಯಕ್ತಿಯು ಕರ್ಮದ ಮೂಲಕ ಪಡೆಯುತ್ತಾನೆ.” ನಮ್ಮ ಬಂಧನಗಳಿಗೆಲ್ಲ ಆಸಕ್ತಿಯೇ ಕಾರಣ. ಆಸಕ್ತಿಯಿಂದಲೇ ಸಂಸ್ಕಾರಗಳು ಉಂಟಾಗುವುದು. ಇದಕ್ಕೆ ಕಾರಣ ಪ್ರಕೃತಿಯ ಪ್ರಚೋದನೆ. ನಿಸ್ವಾರ್ಥತೆಯ ಫಲ ಅನಾಸಕ್ತಿಯಿಂದ ಹುಟ್ಟುವ ಆನಂದ; ಸ್ವಾರ್ಥದ ಫಲ ವಿಷಯಾಸಕ್ತಿಯಿಂದ ಹುಟ್ಟುವ ಬಂಧನ. ಪ್ರಕೃತಿಯ ದಾಸ್ಯದಿಂದ ಬಿಡಿಸಿಕೊಂಡು, ಸ್ವಾತಂತ್ರ್ಯದ ಭಾವನೆಯಿಂದ, ಪ್ರೇಮಭಾವನೆಯಿಂದ ಕೆಲಸಮಾಡಬೇಕು. ಹೀಗೆ **“ಒಡೆಯನಂತೆ ಕೆಲಸ ಮಾಡು, ಗುಲಾಮನಂತೆ ಕೆಲಸ ಮಾಡಬೇಡ, ಅನವರತವೂ ಕೆಲಸ ಮಾಡು”** ಎನ್ನುವುದೇ ಕರ್ಮಯೋಗದ ಸಾರಾಂಶ.

**ಕರ್ತವ್ಯವೆಂದರೇನು? :** ಭಿನ್ನ ಭಿನ್ನ ಪರಿಸ್ಥಿತಿಗಳಲ್ಲಿ ಕರ್ತವ್ಯದ ಭಾವನೆ ಬದಲಾಗುತ್ತಿರುತ್ತದೆ. ಹೀಗಾಗಿ, ಯಾವುದಾದರೊಂದು ನಿರ್ದಿಷ್ಟ ಕಾಲದಲ್ಲಿ ನಮ್ಮ ಕರ್ತವ್ಯವೆಂದು ತೋರುವ ಕೆಲಸವನ್ನು ನಮ್ಮ ಕೈಲಾದಮಟ್ಟಿಗೆ ಮಾಡುವುದೇ ಒಳ್ಳೆಯದು. ಸ್ವಾರ್ಥವಿಲ್ಲದ ಕರ್ತವ್ಯಪ್ರಜ್ಞೆಯಲ್ಲಿ ಮಾತ್ರವೇ ನಮ್ಮ ಉನ್ನತ ಆತ್ಮವು ಬೆಳಗುವಂತೆ ಮಾಡುವ ಶಕ್ತಿ ಇರುತ್ತದೆ. ಕರ್ತವ್ಯ ತತ್ತ್ವವೆಂದರೆ ಇದೇ: “ಸ್ವಾರ್ಥವೇ ಪಾಪ, ನಿಸ್ವಾರ್ಥತೆಯೇ ಪುಣ್ಯ.” ನಿಸ್ವಾರ್ಥತೆ ನಮ್ಮಲ್ಲಿ ಪ್ರೇಮ ಮತ್ತು ಆತ್ಮನಿಗ್ರಹಗಳು ಉಂಟಾಗುವಂತೆ ಮಾಡುತ್ತದೆ. ಆ ಮೂಲಕ ನಮ್ಮ ಆತ್ಮವಿಕಸನವಾಗುತ್ತದೆ. ಕರ್ತವ್ಯವು ಮಧುರವಾಗಿರುವುದು ಅಪರೂಪ. ಅದರ ಚಕ್ರಗಳಿಗೆ ಪ್ರೇಮದ ಎಣ್ಣೆಯನ್ನು ಹಚ್ಚಬೇಕು ಅಂದರೆ ಪ್ರೇಮಪೂರಿತರಾಗಿ ಕರ್ತವ್ಯಗಳನ್ನು ಮಾಡಬೇಕು. ಈ ಪ್ರೇಮವೊಂದೇ ನಮ್ಮ ದೈನಂದಿನ ಜಂಜಾಟಗಳಿಗೆ ಏಕಮಾತ್ರ ಪರಿಹಾರ. ನಾವು ಅಭಿವೃದ್ಧಿ ಹೊಂದಬೇಕಾದರೆ, ನಮ್ಮ ಕೈಗೆ ಎಟುಕುವ ಕರ್ತವ್ಯವನ್ನು ಮಾಡುವುದೊಂದೇ ಪರಿಹಾರ. ಕರ್ತವ್ಯ ಯಾವ ರೀತಿಯದಾಗಿರಲಿ, ಅದನ್ನು ಅಸಡ್ಡೆ ಮಾಡಬಾರದು. ನಾವು ಯಾವ ಕೆಲಸ ಮಾಡುತ್ತೇವೆ ಎನ್ನುವುದು ಮುಖ್ಯವಲ್ಲ, ಯಾವ ಮನೋಭಾವನೆಯಿಂದ ಮಾಡುತ್ತೇವೆ ಎನ್ನುವುದು ಮುಖ್ಯ. ಈ ವಿಷಯದಲ್ಲಿ ಸ್ವಾಮೀಜಿ ಹೀಗೆ ಬೋಧಿಸುತ್ತಾರೆ: “ಗುರಿ ಮತ್ತು ದಾರಿ ಎರಡೂ ಕಲೆತು ಒಂದಾಗಿರಲಿ. ಅದೇ ಕರ್ಮದ ಗುಟ್ಟು. ನೀವು ಯಾವುದೇ ಕರ್ಮವನ್ನು ಮಾಡುತ್ತಿರುವಾಗ ಅದನ್ನು ಬಿಟ್ಟು ಇನ್ನಾವುದನ್ನೂ ಚಿಂತಿಸಬೇಡಿರಿ. ಅದನ್ನು ಪೂಜೆಯಂತೆ ಮಾಡಿ.”

**ಕರ್ಮದಿಂದ ಆಗುವ ಪ್ರಯೋಜನ :** ಸಾಮಾನ್ಯವಾಗಿ ಕರ್ತವ್ಯ ಎಂದರೆ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುವುದು ಎಂಬ ಅಭಿಪ್ರಾಯವಿದೆ. ಆದರೆ ಅದು ಮೇಲುನೋಟಕ್ಕೆ ಮಾತ್ರ ಹಾಗೆ ಕಾಣಿಸುತ್ತದೆ. ನಿಶ್ಚಿತವಾಗಿಯೂ ನಮ್ಮ ಕರ್ತವ್ಯದಿಂದ ನಮಗೆ ನಾವೇ ಸಹಾಯ ಮಾಡಿಕೊಳ್ಳುತ್ತಿದ್ದೇವೆ. ಪ್ರಪಂಚಕ್ಕೆ ನಮ್ಮ ಸಹಾಯದ ಅಗತ್ಯವಿಲ್ಲ. ಅದು ನಮ್ಮ ಸಹಾಯವಿಲ್ಲದಿದ್ದರೂ ಸೊಗಸಾಗಿ ನಡೆಯಬಲ್ಲದು. ಅದೂ ಅಲ್ಲದೆ, ಈ ಪ್ರಪಂಚ ನಾಯಿಯ ಡೊಂಕುಬಾಲದಂತೆ. ನೂರಾರು ವರ್ಷಗಳಿಂದ ಅದು ಹೀಗೆಯೇ ಇದೆ. ಆದರೂ ನಾವು ಇತರರಿಗೆ ಒಳ್ಳೆಯದನ್ನು ಮಾಡಲೇಬೇಕು. ಏಕೆಂದರೆ, ಅಂತಹ ಇಚ್ಛೆಯೆನ್ನುವುದು ಒಂದು ಶ್ರೇಷ್ಠ ನೈತಿಕ ಪ್ರವೃತ್ತಿ. ಈ ಪ್ರಪಂಚವೆನ್ನುವುದು ಆಧ್ಯಾತ್ಮಿಕ ಬಲವನ್ನು ಗಳಿಸಿಕೊಳ್ಳುವುದಕ್ಕೆ ಇರುವ ನೈತಿಕ ವ್ಯಾಯಾಮಶಾಲೆ. ಒಳ್ಳೆಯ ಕಾರ್ಯಗಳು ನಮ್ಮನ್ನು ಪವಿತ್ರರನ್ನಾಗಿಯೂ ಪರಿಪೂರ್ಣರನ್ನಾಗಿಯೂ ಮಾಡುವ ಶಕ್ತಿಯನ್ನು ಹೊಂದಿವೆ. ಹೀಗಾಗಿ ಸಹಾಯ ಮಾಡುವುದು ಎನ್ನುವುದು ನಮಗೆ ಒದಗಿಬಂದಿರುವ ವಿಶೇಷ ಅವಕಾಶ. ಇದರಿಂದ ನಾವು ಶುದ್ಧರೂ ಸಿದ್ಧರೂ ಆಗಬಲ್ಲೆವು. ಆದ್ದರಿಂದ ಈ ಅವಕಾಶ ದೊರೆತಿರುವುದಕ್ಕಾಗಿ ನಾವು ಕೃತಜ್ಞರಾಗಿರಬೇಕು. ನಮ್ಮಿಂದ ಸಹಾಯವನ್ನು ಪಡೆದವರಿಗೆ ನಾವು ಕೃತಜ್ಞರಾಗಿರಬೇಕು. ಅವರನ್ನು ದೇವರಂತೆ

ಭಾವಿಸಬೇಕು. ಸಹಾಯಕ್ಕೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸ ಬಾರದು. ಹೀಗೆ ಅನಾಸಕ್ತಿಯಿಂದ ಇದ್ದರೆ, ದುಃಖವನ್ನು ನೀಗಿ ಕೊಳ್ಳುತ್ತೇವೆ; ಒಳ್ಳೆಯ ಕರ್ಮಗಳನ್ನೇ ಮಾಡುತ್ತ ಹರ್ಷದಿಂದ ಇರುತ್ತೇವೆ. ಇದೇ ನಮ್ಮ ಗುರಿ.

**ಸ್ವಾರ್ಥತ್ಯಾಗ:** ಪ್ರತಿಯೊಂದು ಕರ್ಮವೂ ಫಲವನ್ನು ನೀಡುತ್ತದೆ. ಪ್ರತಿಯೊಂದು ಕರ್ಮವೂ ಶುಭ ಅಶುಭಗಳಿಂದ, ಶುದ್ಧ ಅಶುದ್ಧಗಳಿಂದ ಕೂಡಿದೆ. ಆದ್ದರಿಂದ ಅದರ ಪರಿಣಾಮವೂ ಶುಭ-ಅಶುಭಗಳಿಂದ, ಶುದ್ಧ-ಅಶುದ್ಧಗಳಿಂದ ಕೂಡಿರಲೇಬೇಕು. ಒಂದು ಇದ್ದರೆ, ಇನ್ನೊಂದು ಇರಲೇಬೇಕು. ಹೀಗಾಗಿ ಕರ್ಮದಿಂದ ಪರಿಪೂರ್ಣತೆ ಅಸಾಧ್ಯ ಎಂದು ಗೊತ್ತಾಗುತ್ತದೆ. 'ಪರಿಪೂರ್ಣವಾದ ಜೀವನ' ಎನ್ನುವುದೇ ಒಂದು ವಿರೋಧಾಭಾಸ. ನಮ್ಮ ಜೀವನವೆಂಬುದು ನಿತ್ಯಸಂಗ್ರಾಮದ ಸ್ಥಿತಿ. **"ನಮ್ಮ ಒಳಗಿನ ಯಾವುದೋ ಒಂದಕ್ಕೂ, ಹೊರಗಣ ಪ್ರಪಂಚಕ್ಕೂ ನಡೆಯುವ ತೊಡಕಾದ ಹೋರಾಟವನ್ನೇ ನಾವು ಜೀವನ ಎಂದು ಕರೆಯುತ್ತೇವೆ."** ಹೀಗಾಗಿ ಆತ್ಮಶುದ್ಧಿ ಮಾಡಿಕೊಳ್ಳುವುದೇ, ಆ ಮೂಲಕ ನಮ್ಮನ್ನು ನಾವು ಮರೆಯುವುದೇ ನಾವು ಇತರರಿಗೆ ಸಹಾಯ ಮಾಡುವುದರ ಮುಖ್ಯ ಉದ್ದೇಶ. ಸ್ವಾರ್ಥತ್ಯಾಗದಲ್ಲಿ ಮಾತ್ರವೇ ಆತ್ಯಂತಿಕ ಸುಖವಿದೆ. **ಜ್ಞಾನ, ಭಕ್ತಿ, ಕರ್ಮ** – ಈ ಮೂರೂ ಸೇರುವ ಕೇಂದ್ರಬಿಂದು ಇದು. ಇಲ್ಲಿ 'ನಾನು' ಎಂಬುದು ಸಂಪೂರ್ಣವಾಗಿ ನಾಶವಾಗಿ, 'ನೀನು' ಎನ್ನುವುದು ಮಾತ್ರವೇ ಉಳಿಯುತ್ತದೆ. ಇಂತಹ ಪರಿಪೂರ್ಣ ಆತ್ಮನಿರಾಕರಣವೇ ಪರಮಾದರ್ಶ. ಎಲ್ಲ ಬಗೆಯ ನೀತಿಗೆ ಸ್ವಾರ್ಥತ್ಯಾಗವೇ ಆಧಾರ. ಎಲ್ಲ ನೀತಿನಿಯಮಗಳ ಮೂಲಭೂತತತ್ತ್ವವೇ ಅದು.

ಒಬ್ಬ ಮನುಷ್ಯ 'ನಾನು', 'ನನ್ನದು' ಎಂಬ ಭಾವನೆಯಿಂದ ಕೂಡಿ ಸ್ವಾರ್ಥಿಯಾಗಿರುವ ಭಾವನೆಯನ್ನು 'ಪ್ರವೃತ್ತಿ' ಎನ್ನುತ್ತಾರೆ. ಈ ಭಾವನೆ ಆ ಮನುಷ್ಯನಲ್ಲಿ ಕಡಮೆಯಾಗಲು ತೊಡಗಿದಾಗ, ನಿವೃತ್ತಿ ಅಂಕುರಿಸುತ್ತದೆ. "ಇದೇ ಸಕಲ ನೀತಿ ಧರ್ಮಗಳಿಗೆ ಆಶ್ರಯ... ಓರ್ವನು ತನ್ನ ತನುಮನಗಳೆಲ್ಲವನ್ನೂ, ತನಗೆ ಪ್ರಿಯವಾದುದೆಂದು ಯಾವಯಾವುದನ್ನು ಎಣಿಸುತ್ತಾನೆಯೋ ಅವೆಲ್ಲವನ್ನೂ ಬೇರೆಯವರಿಗೆ ಸಮರ್ಪಿಸುವ ಸಾಮರ್ಥ್ಯವೇ ನಿವೃತ್ತಿ." ಈ ಸ್ಥಿತಿಯನ್ನು ಯಾರು ಮುಟ್ಟಿದ್ದಾರೋ, ಅವರು 'ಕರ್ಮಯೋಗ'ದ ಪರಿಪೂರ್ಣತೆಯನ್ನು ಪಡೆದುಕೊಂಡಿದ್ದಾರೆ ಎಂದೇ ಅರ್ಥ.

ನಮ್ಮ ಹಿಂದೆ ನಾವು ಮಾಡುವ ಕರ್ಮಗಳ ಫಲ ಅಂಟಿಕೊಂಡುಬರುತ್ತದೆ. ನಿಸ್ವಾರ್ಥತೆಯಿಂದ ಮಾಡಿದ ಕಾರ್ಯದ ಫಲ ನಮ್ಮನ್ನು ಅಂಟುವುದಿಲ್ಲ. ಕರ್ಮದ ಫಲ ಅಥವಾ ಭೋಗ ನಮ್ಮ ಗುರಿಯಾಗಿರಬಾರದು. ನಿಸ್ವಾರ್ಥತೆಯ ಪರಿಪೂರ್ಣ ಸ್ಥಿತಿಯೇ ನಮ್ಮ ಉದ್ದೇಶವಾಗಿರಬೇಕು. ನಮ್ಮ ಭೋಗಕ್ಕಾಗಿ ಪ್ರಪಂಚ ಸೃಷ್ಟಿಯಾಗಿಲ್ಲ. ನಮಗಾಗಿ ಅದು ಎಂದೂ ಇರುವುದಿಲ್ಲ. ಹೀಗಾಗಿ ಅದರ ಬಗ್ಗೆ ನಿರ್ಲಿಪ್ತ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ಶ್ರೀರಾಮಕೃಷ್ಣರು ಹೇಳುವಂತೆ, ಶ್ರೀಮಂತರ ದಾಸಿಯ ಹಾಗೆ ಈ ಜಗತ್ತಿನ ಕೆಲಸಗಳನ್ನು ಮಾಡಬೇಕು. ಇದೇ ನಿರಾಸಕ್ತಿಯ ಸ್ಥಿತಿ. ಒಟ್ಟಿನಲ್ಲಿ ಹೇಳುವುದಾದರೆ, ಸ್ವಾರ್ಥತ್ಯಾಗದಿಂದಲೇ ಪೂರ್ಣ ನಿರಾಸಕ್ತಿ ಸಾಧ್ಯ. ಇದೇ ಕರ್ಮಯೋಗದ ಗುರಿ.

**ಮುಕ್ತಿ:** ಕರ್ಮ ಎಂದರೆ 'ಕ್ರಿಯೆ' ಮಾತ್ರವಲ್ಲ, 'ಕಾರಣ' ಎಂದೂ ಆಗುತ್ತದೆ. ಆದ್ದರಿಂದ ಕರ್ಮನಿಯಮವೆಂದರೆ 'ಕಾರಣ ನಿಯಮ' ಎಂದೂ ಅರ್ಥ. ಅಂದರೆ ಯಾವುದೇ ಘಟನೆಯಾಗಲಿ, ಅದಕ್ಕೆ ಪೂರ್ವಕರ್ಮವು ಕಾರಣ. ನಿಯಮವೆಂದರೆ ಘಟನೆಗಳು ಚಕ್ರದಂತೆ ಮತ್ತೆ ಮತ್ತೆ ಆಗುತ್ತಿರುವುದು. ಕಾರಣ, ಕರ್ಮ – ಇವು ಹಾಗೆ ಒಂದರ ಹಿಂದೆ ಇನ್ನೊಂದು ಬರುತ್ತವೆ. ಪ್ರತಿಯೊಂದು ಕರ್ಮಕ್ಕೂ ಕಾರಣ ಇರುತ್ತದೆ ಹಾಗೂ ಪ್ರತಿಯೊಂದು ಕರ್ಮವೂ ಇನ್ನೊಂದು ಕರ್ಮಕ್ಕೆ ಕಾರಣವಾಗುತ್ತದೆ. ಇದನ್ನೇ 'ಕಾರ್ಯ-ಕಾರಣ ನಿಯಮ'ವೆಂದು ಕರೆಯುವುದು. ಈ ನಿಯಮ ಸಾರ್ವತ್ರಿಕವಾದುದು. ಇಂದ್ರಿಯಗೋಚರವಾದ ಅಸ್ತಿತ್ವದ ಅಂಶವೇ ಈ ವಿಶ್ವ. ಇದರಾಚೆಗೂ ಅಸ್ತಿತ್ವವಿದೆ. ಅಲ್ಲಿಗೆ ಈ ನಿಯಮವನ್ನು ಅನ್ವಯಿಸಲಾಗದು. ಅನಂತ ಅಸ್ತಿತ್ವದ ಎಲ್ಲೋ ಅಲ್ಪಭಾಗ ಮಾತ್ರವೇ ನಮ್ಮ ದೃಷ್ಟಿಗೆ ಗೋಚರವಾಗುವ 'ಜೀವಿ' ಎಂಬುವವನು. ಅವನ ಆಲೋಚನೆಗಳು ತಾತ್ಕಾಲಿಕ. ಅವನು ಅಲ್ಪಸುಖಗಳಿಗೆ, ರಾಗದ್ವೇಷಗಳಿಗೆ ಕಟ್ಟುಬಿದ್ದು ತನ್ನ ಅನಂತ ಸ್ವಭಾವವನ್ನು ಮರೆತಿದ್ದಾನೆ, ಈ ತಾತ್ಕಾಲಿಕ ಜಗತ್ತೇ ಶಾಶ್ವತವೆಂದು ಭಾವಿಸಿದ್ದಾನೆ. ಇದನ್ನೇ ಬಂಧನವೆನ್ನುವುದು. ಇದರಿಂದ ಬಿಡುಗಡೆಯೇ ಮುಕ್ತಿ. ಸ್ವಾಮೀಜಿ ಹೀಗೆ ಹೇಳುತ್ತಾರೆ: **" (ಮುಕ್ತಿಯ ಲಾಭಕ್ಕೆ ಇರುವ ಒಂದೇ ಮಾರ್ಗವೆಂದರೆ) ಅಲ್ಪವಾದ ಬದುಕನ್ನು ತ್ಯಜಿಸುವುದು, ಈ ಅಲ್ಪವಾದ ವಿಶ್ವವನ್ನು ತ್ಯಜಿಸುವುದು, ಸ್ವರ್ಗವನ್ನು ತ್ಯಜಿಸುವುದು, ದೇಹವನ್ನು ತ್ಯಜಿಸುವುದು, ಮನಸ್ಸನ್ನು ತ್ಯಜಿಸುವುದು, ಪರಿಮಿತವಾದ ಉಪಾಧಿಬದ್ಧವಾದ ಸರ್ವವನ್ನೂ ತ್ಯಜಿಸುವುದು. ಈ ಕ್ಷುದ್ರವಾದ ವಿಶ್ವದ ಮೇಲಣ ಆಸಕ್ತಿಯನ್ನು ಬಿಟ್ಟುಬಿಡುವೆವಾದರೆ, ನಾವು ಒಡನೆಯೇ ಮುಕ್ತರಾಗುವೆವು."**

**ಮುಕ್ತಿಮಾರ್ಗವಾಗಿ ಕರ್ಮಯೋಗ :** ಈ ಬಗೆಯ ತ್ಯಾಗಬುದ್ಧಿಯನ್ನು ಗಳಿಸಿಕೊಳ್ಳಲು ಎರಡು ಮಾರ್ಗಗಳಿವೆ: ಒಂದು 'ನೇತಿ ನೇತಿ' (ಇಲ್ಲ, ಇಲ್ಲ) ಎನ್ನುವ ಮಾರ್ಗ; ಎರಡನೆಯದು 'ಇತಿ, ಇತಿ' (ಇದೆ, ಇದೆ) ಎನ್ನುವ ಮಾರ್ಗ. ಮೊದಲನೆಯ ಮಾರ್ಗದಲ್ಲಿ ಅನಾಸಕ್ತಿಯು ವಿಚಾರದಿಂದ ಲಭಿಸುತ್ತದೆ. ಎರಡನೆಯದರಲ್ಲಿ ಅನಾಸಕ್ತಿಯು ಕರ್ಮ ಹಾಗೂ ಅನುಭವದ ಮೂಲಕ ಉಂಟಾಗುತ್ತದೆ. ಮೊದಲನೆಯದು **ಜ್ಞಾನಮಾರ್ಗ**. ಎರಡನೆಯದು **ಕರ್ಮಮಾರ್ಗ**. ತಿಳಿದೋ, ತಿಳಿಯದೆಯೋ ಎಲ್ಲ ಜೀವಿಗಳೂ ಮುಕ್ತಿಪ್ರಾಪ್ತಿಗಾಗಿ, ಸ್ವಾತಂತ್ರ್ಯಪ್ರಾಪ್ತಿಗಾಗಿ ಕರ್ಮ ಮಾಡುತ್ತಿವೆ. ಕರ್ಮಯೋಗ ಮಾಡುವ ಕೆಲಸವೆಂದರೆ, ಆ ಕರ್ಮವನ್ನು ಒಂದು ವೈಜ್ಞಾನಿಕ ವಿಧಾನವನ್ನಾಗಿ ಪರಿವರ್ತಿಸುವುದು. ಪ್ರಾಪಂಚಿಕ ವ್ಯವಹಾರಗಳನ್ನೇ ಅತ್ಯಂತ ಲಾಭಕರವಾಗಿ, ನಮ್ಮ ಆಧ್ಯಾತ್ಮಿಕ ಸಿದ್ಧಿಗೆ ಹೇಗೆ ನಾವು ಉಪಯೋಗಿಸಿಕೊಳ್ಳಬಹುದು ಎನ್ನುವುದನ್ನು ನಾವು